ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.576/2023**

**PW-3 CW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರವಿ ಉರ್ಫ ರವೀಂದ |
| ತಂದೆ | ಃ | ಬಸ್ಸಪ್ಪ |
| ವಯಸ್ಸು | ಃ | 45 |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **07.08.2025** |

---

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ಮಧ್ಯವನ್ನು ಜಪ್ತಿ ಮಾಡಿಕೊಂಡಿಲ್ಲ. ಪಂಚನಾಮೆಯ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.

ದಿನಾಂಕ 17-04-2023 ರಂದು ಸಂಜೆ 05.45 ರಿಂದ 06.45 ಗಂಟೆ ವರೆಗೆ ಘಟನ ಸ್ಥಳದಲ್ಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಮಧ್ಯವನ್ನು ಜಪ್ತಿ ಮಾಡಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.576/2023**

**CW-1 PW-2**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪ್ರಕಾಶ ಸಿ |
| ತಂದೆ | ಃ | ಗೋವಿಂದಪ್ಪ |
| ವಯಸ್ಸು | ಃ | 41 |
| ಉದ್ಯೋಗ | ಃ | ಪಿ ಎಸ್ ಐ |
| ವಾಸಸ್ಥಳ | ಃ | ಕೂಡ್ಲಿಗಿ |
| ಪ್ರಮಾಣಿಕರಿಸಿದ ದಿನಾಂಕ | ಃ | **07-08-2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ನಾನು ದಿನಾಂಕ 15.02.2023 ರಿಂದ ದಿನಾಂಕ 14.06.2023 ವರೆಗೆ ಗಬ್ಬೂರು ಠಾಣೆಯಲ್ಲಿ ಪಿಎಸ್ ಐ ಎಂದು ಕೆಲಸ ಮಾಡಿರುತ್ತೇನೆ.

ದಿನಾಂಕ **17-04-2023** ರಂದು ಸಂಜೆ **05.15** ಗಂಟೆಗೆ ನಾನು ಠಾಣ ಪ್ರಬಾರದಲ್ಲಿ ಇದ್ದಾಗ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟದ ಬಾತ್ಮಿ ಮೇರೆಗೆ ತಕ್ಷಣ ಸಿಬ್ಬಂದಿ ಮೂಲಕ ಪಂಚರನ್ನು ಬರ ಮಾಡಿಕೊಂಡು ಸಿಬ್ಬಂದಿ ಜೊತೆ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ದಾಳಿ ಮಾಡಿದಾಗ ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿ ಹೋಗಿದ್ದು ಆತನ ಬಗ್ಗೆ ವಿಚಾರಿಸಿದಾಗ ಆತನ ಹೆಸರು ಬಸ್ಸಣ್ಣ ತಂದೆ ಕರಿ ಬಸ್ಸಪ್ಪ ಎಂದು ತಿಳಿದು ಬಂದಿರುತ್ತದೆ. ಸ್ಥಳದಲ್ಲಿ ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ **90** ಎಂ.ಎಲ ಓ.ಸಿ ಡಿಲಕ್ಸ ವಿಸ್ಕಿ **50** ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳಲ್ಲಿ ಒಂದು ಪೌಚನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಪಿಆರ್ ಒ ಎಂದು ಸೀಲ್ ಮಾಡಿಲಾಗಿರುತ್ತದೆ. ನಂತರ ಠಾಣೆಗೆ ಬಂದು ಜಪ್ತಿ ಮಾಡಿದ ಮುಮಾ, ದೂರು ಮತ್ತು ಪಂಚನಾಮೆ ಜೊತೆ ಚಾಸಾ-**8** ರವರಿಗೆ ಪ್ರಕರಣ ದಾಖಲು ಮಾಡಲು ಹೇಳಿರುತ್ತೇನೆ.

ಪಂಚನಾಮೆಯನ್ನು ನಿಪಿ-**1** ಎಂದು ಸಹಿಯನ್ನು ನಿಪಿ-**1** ಎ ಎಂದು, ಜ್ಞಾಪನ ಪತ್ರವನ್ನು ನಿಪಿ-**2** ಎಂದು ಸಹಿಯನ್ನು ನಿಪಿ-**2** ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎನ್ ವಕೀಲರಿಂದ.</u>

ನನಗೆ ಬಾತ್ಮಿ ಸಂಜೆ 05.15 ಗಂಟೆಗೆ ಬಂದಿರುತ್ತದೆ. ಠಾಣೆಯಿಂದ ಹೋಗುವಾಗ ಸಂಜೆ 05.30 ಗಂಟೆ ಆಗಿತ್ತು. ಪಂಚರನ್ನು ವಿನೋದ ಸಿಬ್ಬಂದಿ ಕರೆದುಕೊಂಡು ಬಂದಿರುತ್ತಾರೆ. ಗುನ್ನ ಸ್ಥಳಕ್ಕೆ ಹೋದಾಗ ಸಂಜೆ 05.45 ಗಂಟೆ ಆಗಿತ್ತು. ತಕ್ಷಣ ದಾಳಿ ಮಾಡಿರುತ್ತೇವೆ. ಘಟನ ಸ್ಥಳದಲ್ಲಿ ಕಿರಾಣಿ ಅಂಗಡಿ ಇದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಾರೆಮ್ಮ ಗುಡಿ ಇದೆ ಎಂದರೆ ಸರಿ. ಗುಡಿಯಲ್ಲಿ ಸಾಕಷ್ಟು ಜನ ಕುಂತಿದ್ದರು ಎಂದರೆ ಆ ಸಮಯಕ್ಕೆ ಜನರು ಇರಲಿಲ್ಲ ಎಂದು ನುಡಿಯುತ್ತಾರೆ. ಘಟನ ಸ್ಥಳದ ಸ.ನಂ. ಹೇಳಲು ಬರುವುದಿಲ್ಲ. ಆರೋಪಿಯನ್ನು ಹಿಡಿಯಲು ಪ್ರಯತ್ನಪಟ್ಟಾಗ ಸಿಕ್ಕಿರುವುದಿಲ್ಲ. ಸ್ಥಳದಲ್ಲಿ ಆರೋಪಿಗೆ ಸೇರಿದ ಅಂಗಡಿ ಇದೆ ಎಂದರೆ ಸಾಕ್ಷಿ ಸ್ವಲ್ಪ ಅಂತರದಲ್ಲಿ ಇದೆ ಎಂದು ನುಡಿಯುತ್ತಾರೆ. ಖಾನಪೂರು ಗ್ರಾಮಕ್ಕೆ ಹೋಗಲು ಗಬ್ಬೂರಿನಿಂದ ಹೋಗಬೇಕು ಎಂದರೆ ಸರಿ. ಜಪ್ತಿ ಮಾಡಿಕೊಂಡ ಮಧ್ಯದ ಪೌಚುಗಳು ಪರವಾನಿಗೆ ಪಡೆದ ಮಧ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ಸದರಿ ಜಪ್ತಿ ಮಾಡಿಕೊಂಡ ಮಧ್ಯದ ಸಿರಿಯಲ್ ನಂ. ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.